# ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246170 www.shimul.coop**


ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಸಂಸ್ಕರಣೆ/ ಟೆಂಡರ್/01/ 2016–17/1208–A ದಿನಾಂಕ: 16.05.2016

**–: *ಬಿ.ಎಂ.ಸಿ. ಮಾರ್ಗದ ಹಾಲಿನ ಟ್ಯಾಂಕರ್‌ಗಳನ್ನು ಮತ್ತು ಕಾರು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–***

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಹಾಲಿನ ಟ್ಯಾಂಕರ್‌ಗಳನ್ನು ಮತ್ತು ಅಭಿಯಂತರ ವಿಭಾಗದ ಕಚೇರಿ ಕೆಲಸ ಕಾರ್ಯಗಳಿಗೆ ಟಾಟಾ ವಿಸ್ತ ವಾಹನ ಒದಗಿಸಲು ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 23.05.2016 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 22.06.2016 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **24.06.2016** ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 27.06.2016 ರಂದು ಬೆಳಿಗ್ಗೆ: **11.30** ಗಂಟೆಗೆ |

**I. ಒಕ್ಕೂಟದ ವ್ಯಾಪ್ತಿಯಲ್ಲಿನ ಬಿ.ಎಂ.ಸಿ ಸಂಘಗಳಿಂದ ಹಾಲು ಸಾಗಾಣಿಕೆ ಮಾಡಲು 2005 ರ ಅಥವಾ ನಂತರದ ಮಾದರಿಯ 12 ಟನ್ ಮತ್ತು 15 ಟನ್ ಸಾಮರ್ಥ್ಯದ ಹಾಲು ಸಾಗಾಣಿಕೆ ಟ್ಯಾಂಕರ್ ಹೊಂದಿರುವ ಮತ್ತು ಅಭಿಯಂತರ ವಿಭಾಗದ ಕಚೇರಿ ಕೆಲಸ ಕಾರ್ಯಗಳಿಗೆ ಟಾಟಾ ವಿಸ್ತ 2010 ರ ಅಥವಾ ನಂತರದ ವಾಹನ ಒದಗಿಸಲು ವಾಹನ ಹೊಂದಿರುವ ಮಾಲೀಕರಿಂದ ಟೆಂಡರ್ ಆಹ್ವಾನಿಸಲಾಗಿದೆ. ಬಿ.ಎಂ.ಸಿ ಸಂಘಗಳಿಂದ ಹಾಲು ಪರೀಕ್ಷೆ ಮಾಡಿ ಹಾಲಿನ ಪ್ರಮಾಣವನ್ನು ಧೃಢೀಕರಿಸಿಕೊಂಡು ವಾಹನಕ್ಕೆ ತುಂಬಿಸಿಕೊಳ್ಳುವ ಜವಾಬ್ದಾರಿ ಗುತ್ತಿಗೆದಾರರದ್ದು. ಸಂಘದ ಹಾಲಿನ ಪ್ರಮಾಣ ಮತ್ತು ಗುಣಮಟ್ಟ ಡೈರಿಯಲ್ಲಿ ಪರಿಶೀಲಿಸಿದಾಗ ಹೊಂದಾಣಿಕೆಯಾಗಬೇಕು. ಗುತ್ತಿಗೆ ಅವಧಿ 02 ವರ್ಷ :–**

| ಕ್ರ. ಸಂ | ಮಾರ್ಗಗಳ ವಿವರ | ವಾಹನ ಸಾಮರ್ಥ್ಯ ಟನ್‌ಗಳಲ್ಲಿ / ಮಾದರಿ | ಅಂದಾಜು ದಿನದ ಅಂತರ | ಇ.ಎಂ.ಡಿ ` | ಭದ್ರತಾ ಠೇವಣಿ ` |
|---|---|---|---|---|---|
| 1 | ಶಿವಮೊಗ್ಗ ಬಿ.ಎಂ.ಸಿ.–4 ಮಾರ್ಗ (ಶಿವಮೊಗ್ಗ ಡೈರಿಯಿಂದ ಕಾಗಿನೆಲ್ಲಿ, ಮಾರವಳ್ಳಿ, ಬೇಗೂರು ,ಅಂಬಾರಗೊಪ್ಪ, ಚುರ್ಚುಗುಂಡಿ, ಶಿವಮೊಗ್ಗ ಡೈರಿ) | 15 ಟನ್ | 169 ಕಿ.ಮೀ | 50,000/– | 2,50,000/– |
| 2 | ದಾವಣಗೆರೆ ಬಿ.ಎಂ.ಸಿ.–2 ಮಾರ್ಗ ( ದಾವಣಗೆರೆ ಡೈರಿಯಿಂದ ಕೊಕ್ಕನೂರು, ಹಳ್ಳಿಹಾಳ್, ಜಿ. ಬೇವಿನಹಳ್ಳಿ, ಬೆಳ್ಳೂಡಿ ದಾವಣಗೆರೆ ಡೈರಿ | 12 ಟನ್ | 72 ಕಿ.ಮೀ | 50,000/– | 2,00,000/– |
| 3 | ದಾವಣಗೆರೆ ಬಿ.ಎಂ.ಸಿ. –5 ಮಾರ್ಗ (ಚಿತ್ರದುರ್ಗ ಶೀ.ಕೇಂದ್ರದಿಂದ ಧರ್ಮಪುರ, ಚಿಲ್ಲಹಳ್ಳಿ, ಹರಿಯಬ್ಬೆ, ಕರಿಕೆರೆ, ಚಿತ್ರದುರ್ಗ ಶೀತಲೀಕರಣ ಕೇಂದ್ರ) | 12 ಟನ್ | 184 ಕಿ.ಮೀ | 50,000/– | 2,00,000/– |
| 4 | ಅಭಿಯಂತರ ಕಚೇರಿ ಕೆಲಸ ಕಾರ್ಯಗಳ ಮಾರ್ಗ ಶಿವಮೊಗ್ಗ | ಟಾಟಾ ವಿಸ್ತಾ | 3000 ಕಿ.ಮೀ | 10,000/– | 20,000/– |

## ನಿಬಂಧನೆ ಮತ್ತು ಷರತ್ತುಗಳು

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು ಮತ್ತು ದಾಖಲಾತಿಗಳನ್ನು ಹೊಂದಿರತಕ್ಕದ್ದು.
2. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಇ.ಎಂ.ಡಿ. ಮೊತ್ತವನ್ನು ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲಿನ ಟ್ಯಾಂಕರ್‌ಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ. ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ.
5. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು. ಮಾರ್ಗದ ವಿವರಗಳನ್ನೊಳಗೊಂಡ ಶೆಡ್ಯೂಲನ್ನು ಟೆಂಡರ್ ಫಾರಂನೊಂದಿಗೆ ಲಗತ್ತಿಸಲಾಗಿದೆ.
6. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಗುತ್ತಿಗೆ ರದ್ದು ಮಾಡಲಾಗುವುದು. ಮಾರ್ಗಗಳ ಪುನರ್ ವಿಂಗಡನೆ ಮಾಡಲಾಗುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
7. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
8. ತಾಂತ್ರಿಕ/ಯಾಂತ್ರಿಕ ಕಾರಣಗಳಿಂದ ಬಿ.ಎಂ.ಸಿ ಕೇಂದ್ರಗಳೇನಾದರೂ ಸ್ಥಗಿತಗೊಂಡು ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಸ್ಥಗಿತಗೊಂಡಲ್ಲಿ ಹಾಲಿನ ಟ್ಯಾಂಕರ್‌ಗಳು ಚಲಿಸಿದ ಅಂತರಕ್ಕೆ ಮಾತ್ರ ಹಣ ಪಾವತಿಸಲಾಗುವುದು.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಾರಿಗೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.

ದಿನಾಂಕ : 16.05.2016
ಸ್ಥಳ : ಮಾಚೇನಹಳ್ಳಿ